ಓ.ಎಸ್.ನಂ:121-2013 ಪಿಡಬ್ಲುಃ-1.

ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 25-04-2018

ಪಾಟೀ ಸವಾಲು : ಪ್ರತಿವಾದಿ ಪರಃ ಶ್ರೀ ಎ.ಎಫ್.ಸಿ. ವಕೀಲರಿಂದಃ

ನಮ್ಮ ತಂದೆಯ ತಂದೆ ಮಲ್ಲಾರೆಪ್ಪ ಎಂದರೆ ಸರಿ. ಅವನ ಹೆಂಡತಿ ಸಾವಕ್ಕ ಎಂದರೆ ಸರಿ. ಇವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಗಂಡು ಮಕ್ಕಳ ಪೈಕಿ ಗುಡ್ಡಪ್ಪ ನನ್ನ ತಂದೆ ಎಂದರೆ ಸರಿ. ಈಗ ನನ್ನ ತಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಸುಂದರಮ್ಮ ಕೂಡಾ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರಿಗೆ ಆರು ಜನ ಮಕ್ಕಳು ಎಂದರೆ ಸರಿ. ನನ್ನ ತಂದೆಯ ಸಹೋದರ ಚಂದ್ರಶೇಖರ ಈ ದಾವೆಯಲ್ಲಿ ಮೊದಲನೆ ಪ್ರತಿವಾದಿ ಎಂದರೆ ಸರಿ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ನನ್ನ ತಂದೆಯ ಸಹೋದರಿಯರು 1. ಕಸ್ತೂರಿಬಾಯಿ 2. ಶಾರದಾಬಾಯಿ 3. ಸಂಕಮ್ಮ ಮತ್ತು 4. ಲಕ್ಷ್ಮಮ್ಮ ಎಂದರೆ ಸರಿ. ನಮ್ಮ ದಾವೆಗೆ ನನ್ನ ತಂದೆಯ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲಾ ಎಂದರೆ ಸರಿ.

ದಾವಾ ಸ್ವತ್ತು ನಮ್ಮ ಘರಾಣೆದ ಮೂಲ ಪುರುಷ ಮಲ್ಲಾರೆಪ್ಪನ ಆಸ್ತಿ ಎಂದರೆ ಸರಿ. ನಮ್ಮ ಅಜ್ಜನ ಆಸ್ತಿ ನಮ್ಮ ತಂದೆಗೆ ಬಂದಿದ್ದು ಅದನ್ನು ನಮ್ಮ ಹೆಸರಿಗೆ ಮಾಡಿಕೊಳ್ಳುವ ಸಲುವಾಗಿ ದಾವೆ ಸಲ್ಲಿಸಿರುತ್ತೇವೆ. ನನ್ನ ಅಜ್ಜ ಜೀವಂತ ಇದ್ದಾಗ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ವಾಟ್ನಿ ಮಾಡಿದ್ದರು. ಅದರಿಂದ ದಾವಾ ಆಸ್ತಿ ನನ್ನ ತಂದೆಗೆ ಬಂದಿತ್ತು. ನನ್ನ ಅಜ್ಜ ವಾಟ್ನಿ ಮಾಡಿದ್ದು ಆ ಪತ್ರ ನೋಂದಾವಣಿ ಆದ ಬಗ್ಗೆ ಗೊತ್ತಿಲ್ಲಾ. ನನ್ನ ಅಜ್ಜ ಮಾಡಿದ ವಾಟ್ನಿ ಪತ್ರವನ್ನು ನಾನು ನೋಡಿಲ್ಲಾ ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ.

ದಾವಾ ಆಸ್ತಿಯಲ್ಲಿ ನನ್ನ ತಂದೆಯ ಸಹೋದರಿಯರಿಗೂ ಕೂಡಾ ಹಿಸ್ಸೆ ಇದ್ದು ಆದರೆ ಮೋಸದಿಂದ ನನ್ನ ತಂದೆ ವಾಟ್ನಿ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲಾ ನನ್ನ ಅಜ್ಜ ಹೆಣ್ಣುಮಕ್ಕಳನ್ನು ಒಳ್ಳೆಯ ಮನೆತನಕ್ಕೆ ಕೊಟ್ಟು, ಹಣ ಕೊಟ್ಟು ಮದುವೆ ಮಾಡಿದ್ದು ಅವರಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಇರುವದಿಲ್ಲಾ. ಈ ವಿಷಯವನ್ನು ನನ್ನ ದಾವೆಯಲ್ಲಿ ನಮೂದಿಸಿಲ್ಲಾ. ಹೆಣ್ಣುಮಕ್ಕಳಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

(ಈ ಹಂತದಲ್ಲಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.